ಶಹಾಪುರ ಬಸ್ ಡಿಪೋದ ಬಸ್‌ಗಳ ಬಗ್ಗೆ

೫೦೪. ಶ್ರೀ ಶಿವಶೇಖರಗೌಡ, ಶಿರವಾಳ (ಶಹಾಪುರ).—ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಹಾಪುರ ಬಸ್ ಡಿಪೋ ಪ್ರಾರಂಭವಾದಾಗ ಇದ್ದ ಬಸ್‌ಗಳ ಸಂಖ್ಯೆ ಎಷ್ಟು ?

ಆ) ಸದರಿ ಬಸ್ಸುಗಳ ಪೈಕಿ ಹೊಸ ಮತ್ತು ಹಳೆಯ ಬಸ್ಸುಗಳೆಷ್ಟು ?

ಇ) ಸದರಿ ಡಿಪೋದಲ್ಲಿ ಸುಸ್ಥಿತಿಯಲ್ಲಿರುವ ಬಸ್ಸುಗಳ ಸಂಖ್ಯೆ ಎಷ್ಟು ?

ಈ) ಎರಡು ಸಿಟಿ ಬಸ್ಸುಗಳನ್ನು ಶಹಾಪುರಕ್ಕೆ ಪೂರೈಸುವುದಾಗಿ ಸಾರಿಗೆ ಸಚಿವರು ತಿಳಿಸಿದ್ದು ನಿಜವಲ್ಲವೆ ?

ಉ) ಜನರ ಅನುಕೂಲಕ್ಕೋಸ್ಕರ ಈ ಡಿಪೋದಿಂದ ರಾಜ್ಯದ ಇತರ ಜಿಲ್ಲಾ ಮುಖ್ಯ ಸ್ಥಳಗಳಿಗೆ ಹಾಗೂ ಬೆಂಗಳೂರಿಗೆ ಬಸ್ಸುಗಳನ್ನು ಹಾಕಲು ಸರಕಾರದವರು ಜರೂರು ಕ್ರಮ ಕೈಗೊಳ್ಳುವರೆ ?

ಶ್ರೀ ಸಿದ್ಧರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ದಿನಾಂಕ ೨೪-೭-೮೮ ರಂದು ಶಹಾಪುರ ಬಸ್ ಡಿಪೋ ಪ್ರಾರಂಭವಾಯಿತು. ಆಂದು ೫೭ ಬಸ್ಸುಗಳಿದ್ದವು.

ಆ) ಈ ಪೈಕಿ ೧೧ ಹೊಸ ಬಸ್ಸುಗಳು ಮತ್ತು ೩ ಹಳೆಯ ಬಸ್ಸುಗಳು. ಮಿಕ್ಕ ೫೫ ಬಸ್ಸುಗಳು ಒಂದು ಸಾರಿಯೂ ರೀಕಂಡೀಷನ್ ಆಗಿಲ್ಲ. ಕೇವಲ ೧೮ ಬಸ್ಸುಗಳು ಮಾತ್ರ ರೀಕಂಡೀಷನ್ ಆಗಿವೆ.

ಇ) ಸದರಿ ಡಿಪೋನಲ್ಲಿ ೫೩ ಬಸ್ಸುಗಳು ಸುಸ್ಥಿತಿಯಲ್ಲಿದ್ದು ಸಂಚಾರ ಯೋಗ್ಯವಾಗಿವೆ.

ಈ) ಗ್ರಾಮಾಂತರ ಬಸ್ಸಿನ ದರದಲ್ಲಿ ಶಹಾಪುರ—ಭೀಮರಾಯನ ಗುಡಿ ಮತ್ತು ಶಹಪುರ ಗೋಗಿಗಳ ನಡುವೆ ನಗರ ಬಸ್ ಮಾದರಿಯ (ಎರಡು ಬಾಗಿಲುಳ್ಳ) ಒಂದು ಬಸ್ಸನ್ನು ಈಗಾಗಲೇ ಓಡಿಸ ಲಾಗುತ್ತಿದೆ. ಮತ್ತೊಂದು ಬಸ್ಸನ್ನು ಶೀಘ್ರದಲ್ಲಿಯೇ ಶಹಾಪುರ ಘಟಕಕ್ಕೆ ನೀಡಲಾಗುವುದು.

ಉ) ಈ ಡಿಪೋದಿಂದ ಹಾಲಿ ರಾಯಚೂರು ಜಿಲ್ಲಾ ಕೇಂದ್ರಕ್ಕೆ ಮಾತ್ರ ನೇರ ಬಸ್ಸನ್ನು ಹಾಕ ಲಾಗಿದೆ. ಆದರೆ ಶಹಾಪುರದ ಮೇಲೆ ಹಾದುಹೋಗುವ ಬಸ್ಸುಗಳು ಬೆಂಗಳೂರು ಸೇರಿದಂತೆ ರಾಜ್ಯದ ೯ ಜಿಲ್ಲಾ ಕೇಂದ್ರಗಳನ್ನು ಸಂಪರ್ಕಿಸುತ್ತವೆ. ಜೊತೆಗೆ ರಾಜ್ಯದ ಪ್ರಮುಖ ನಗರಗಳು ಸೇರಿದಂತೆ ರಾಜ್ಯದ ಇತರೆ ಜಿಲ್ಲೆಯಲ್ಲಿ ೩೨ ತಾಲ್ಲೂಕು ಕೇಂದ್ರಗಳಿಗೆ ಬಸ್ ಸೌಕರ್ಯವನ್ನು ಈಗಾಗಲೇ ಕಲಿ ಸಲಾಗಿದೆ. ನಿರ್ದಿಷ್ಟ ಸ್ಥಳಗಳಿಗೆ ಬಸ್ ಸೌಲಭ್ಯದ ಬಗ್ಗೆ ಬೇಡಿಕೆಗಳು ಬಂದಲ್ಲಿ ಸೂಕ್ತ ಕ್ರಮ ಕೈಗೊಳ್ಳ ಲಾಗುವುದು.

ಬೆಂಗಳೂರು ಮತ್ತು ದೇವನಹಳ್ಳಿ ನಡುವೆ ಸಂಚರಿಸುವ ಬಸ್ಸುಗಳು

೫೦೫. ಶ್ರೀ ಪಿ. ಸಿ. ಮುನಿಸ್ವಾಮಯ್ಯ (ದೇವನಹಳ್ಳಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಮತ್ತು ದೇವನಹಳ್ಳಿ ನಡುವೆ ಪ್ರತಿ ದಿನ ಸಂಚರಿಸುತ್ತಿರುವ ಪೇಗದೂತ ಮತ್ತು ಸಾಮಾನ್ಯ ಬಸ್ಸುಗಳ ಸಂಖ್ಯೆ ಎಷ್ಟು ?

ಆ) ಬೆಂಗಳೂರು ಚಿಕ್ಕಬಳ್ಳಾಪುರಗಳ ನಡುವೆ ಸಂಚರಿಸುತ್ತಿರುವ (ನಿಲುಗಡೆ ರಹಿತ) ಬಸ್ಸು ಗಳು ದೇವನಹಳ್ಳಿಯಲ್ಲಿ ನಿಲ್ಲದೆ ಇರುವುದು ನಿಜವೇ ?

ಇ) ಹಾಗಿದ್ದಲ್ಲಿ ಈ ಎಲ್ಲಾ ಬಸ್ಸುಗಳಿಗೆ ದೇವನಹಳ್ಳಿಯಲ್ಲಿ ಬಳಿ ನಿಲುಗಡೆ ನೀಡಲು ಸರ್ಕಾರವು ಕ್ರಮ ಕೈಗೊಳ್ಳುವುದೆ ?